**ದಿನಾಂಕ:04.08.2022 ರಂದು ಸಾಕ್ಷಿಯನ್ನು ಮಧ್ಯಂತರ ಅರ್ಜಿ ಸಂಖ್ಯೆ.13 ರಿಂದ 14 ರ ಆದೇಶದ ಮೇರೆಗೆ ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಜಿ.ಆರ್.ಎ., 2 ನೇ ಪ್ರತಿವಾದಿ ಪರ ವಕೀಲರಿಂದ**

8. ಪಾಲುವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಾತ ತಿಮ್ಮಪ್ಪನ 4 ಜನ ಮಕ್ಕಳಿಗೆ ಯಾವ ಆಸ್ತಿಯಲ್ಲಿ ಎಷ್ಟು ಭಾಗ ಹೋಗಿರುತ್ತದೆ ಅಂತ ಹೇಳಲು ಬರುವುದಿಲ್ಲ. ದಾವಾ ಜಮೀನಿನ ಪೂರ್ವ ದಿಕ್ಕಿಗೆ ಇದೇ ಸರ್ವೆ ನಂಬರ್ ಜಮೀನು ಬರುತ್ತದೆ.



ಸದರಿ ಜಮೀನು ಜಯಮ್ಮ ಕೋಂ ತಿಮ್ಮಪ್ಪ ಇವರಿಗೆ ಸೇರಿರುತ್ತದೆ. ಪಶ್ಚಿಮ ದಿಕ್ಕಿಗೆ ಗ್ರಾಮ ಠಾಣಾ ಮನೆಗಳು ಬರುತ್ತವೆ. ಉತ್ತರಕ್ಕೆ ಜೋಗಿ ಹಟ್ಟಿ ರಸ್ತೆ ಬರುತ್ತದೆ. ದಕ್ಷಿಣಕ್ಕೆ ದೊಡ್ಡತಿಪ್ಪಯ್ಯನ ಜಮೀನು ಬರುತ್ತದೆ. ಸದರಿ ಜಮೀನು ಸರ್ವೆ ನಂಬರ್ 86/3 ಅಂತ ಇರುತ್ತದೆ. ಸರ್ವೆ ನಂಬರ್ 86 ರ ಒಟ್ಟು ವಿಸ್ತೀರ್ಣ ಎಷ್ಟು ಅಂತ ಹೇಳಲು ಬರುವುದಿಲ್ಲ. ಸರ್ವೆ ನಂಬರ್ 86 ರ ಜಮೀನಿನಲ್ಲಿ ಯಾರು ಯಾರು ಎಷ್ಟು ವಿಸ್ತೀರ್ಣದ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಅಂತ ಹೇಳಲು ಬರುವುದಿಲ್ಲ.

9. ದಿನಾಂಕ.25.08.1993 ರಂದು ನಾನು, ನನ್ನ ಸಹೋದರ ಶಿವಮೂರ್ತಿ, ಅಯ್ಯಪ್ಪ, ತಿಪ್ಪಯ್ಯ ಮತ್ತು ವರಗ ಚಂದ್ರಪ್ಪ ಎಲ್ಲರೂ ಸೇರಿ ಒಂದು ಕರಾರು ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಂತೆ ನಾನು ಮತ್ತು ನನ್ನ ಸಹೋದರ ಒಟ್ಟು 12 ಜನರಿಗೆ ಸರ್ವೆ ನಂಬರ್ 86/3 ರಲ್ಲಿ ನಿವೇಶನಗಳನ್ನಾಗಿ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ 12 ಜನರ ಪೈಕಿ 2 ನೇ ಪ್ರತಿವಾದಿ ತಾಯಿ ಮಾಳಮ್ಮ ಇವರಿಗೂ ಸಹ ನಾನು ನಿವೇಶನವನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ರಂಗಪ್ಪ ಬಿನ್ ತಿಪ್ಪಯ್ಯ ಎಂದರೆ ನಾನೇ ಎಂದರೆ ಸರಿ.

10. ನಾನು ಓ.ಎಸ್.579/1993 ರಂತೆ ಬಸಪ್ಪ, ಹೇಮಣ್ಣ, ಮಚ್ಚೇಂದ್ರಪ್ಪ, ಸಿದ್ದಪ್ಪರ ತಿಪ್ಪಯ್ಯ, ರುದ್ರಪ್ಪ, ಕರಿಚನ್ನಪ್ಪ, ಮೋನಾಕಾಳು ರಂಗಪ್ಪ, ಹೆಚ್. ನಾಗರಾಜ್ ಮತ್ತು ಇತರರ ವಿರುದ್ಧ ದಾವೆಯನ್ನು ಸಲ್ಲಿಸಿದ್ದೇನು ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಎ. ಚಂದ್ರಶೇಖರಯ್ಯ ವಕೀಲರ ಮೂಲಕ ದಾಖಲಿಸಿದ್ದೆ ಎಂದರೆ ಸರಿಯಲ್ಲ. ನಾನು ಸದರಿ ದಾವೆಯಲ್ಲಿ ಸರ್ವೆ ನಂಬರ್ 86/3 ಎ ಕ್ಷೇತ್ರ 26 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಘೋಷಣಾತ್ಮಕ ಪರಿಹಾರ ಕೇಳಿ

ಸಲ್ಲಿಸಿದ್ದೇನು ಎಂದರೆ ಸಾಕ್ಷಿಯು ನಾನು ಆ ರೀತಿ ಯಾವುದೇ ದಾವೆಯನ್ನು ಸಲ್ಲಿಸಿರಲಿಲ್ಲ ಎಂದು ನುಡಿಯುತ್ತಾರೆ.

11. ಸರ್ವೆ ನಂಬರ್ 86/3 ಎ ನೇದ್ದರಲ್ಲಿ ನಮಗೆ ಸೇರಿದ ಕೇವಲ ಒಂದೇ ಜಮೀನು ಇದ್ದು ಅದರ ವಿಸ್ತೀರ್ಣ 20 ಗುಂಟೆ ಇರುತ್ತದೆ. ಓ.ಎಸ್.579/1993 ನ್ನು ನಾನು ಈಗಾಗಲೇ 12 ಜನರೊಂದಿಗೆ ಮಾಡಿಕೊಂಡಿದ ದಿನಾಂಕ.25.08.1993 ರ ಕರಾರು ಪತ್ರದಂತೆ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಓ.ಎಸ್.579/1993 ರಲ್ಲಿ ರಾಜೀ ಮಾಡಿಕೊಡಂತೆ ಪ್ರತಿವಾದಿ ಮತ್ತು ಇತರರು ತಮ್ಮ ತಮ್ಮ ನಿವೇಶನಗಳಲ್ಲಿ ಮನೆ ಕಟ್ಟಿಸಿಕೊಂಡು 1993 ನೇ ಇಸವಿಯಿಂದ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ.



12. ಕರಾರು ಪತ್ರದಂತೆ ನಾನು ಮಾರಾಟ ಮಾಡಿದ ನಿವೇಶನಗಳಲ್ಲಿ ಸುಮಾರು 25 ಮನೆಗಳನ್ನು ಕಟ್ಟಿಸಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ನಾನು ಈಗಲೂ ನವಣೆ ಮತ್ತು ಈರುಳ್ಳಿ ಬೆಳೆಯುತ್ತೇನೆ. ನನ್ನ ವಾದ ಪತ್ರದಲ್ಲಿ 2 ನೇ ವಾದಿ ಶಿವಮೂರ್ತಿ ದಾವಾ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಆ ರೀತಿ ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾವ ಯಾವ ವರ್ಷ ಯಾವ ಬೆಳೆ ಬೆಳೆದಿರುತ್ತೇನೆ ಅಂತ ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಬೆಳೆ ಬೆಳೆದಿದ್ದು ನಿಜ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವಂತಹ ಪಹಣಿ ಪತ್ರಿಕೆಯಲ್ಲಿ ನವಣೆ ಮತ್ತು ಈರುಳ್ಳಿ ಬೆಳೆ ಬೆಳೆದಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

13. ದಾವಾ ಜಮೀನು ಈಗ ವ್ಯವಸಾಯದ ಜಮೀನು ಆಗಿರದೇ ಅದರಲ್ಲಿ ಸುಮಾರು 35 ರಿಂದ 40 ವರ್ಷಗಳಿಂದ ಪ್ರತಿವಾದಿ ಮತ್ತು ಇನ್ನಿತರರು ಸುಮಾರು 25 ಮನೆಗಳನ್ನು ಕಟ್ಟಿಸಿಕೊಂಡು ವಾಸ ಇರುತ್ತಾರೆ ಎಂದರೆ ಸರಿಯಲ್ಲ.

14. ಸಾಕ್ಷಿಗೆ ವಾದಿಯರು ಸಲ್ಲಿಸಿರುವ ಎರಡು ಛಾಯ ಚಿತ್ರಗಳನ್ನು ತೋರಿಸಲಾಗಿ ಅದರಲ್ಲಿ ಯಾರು ನಿಂತಿರುತ್ತಾರೆ ಅಂತ ಕೇಳಲಾಗಿ ಸಾಕ್ಷಿಯು ಸದರಿ ಎರಡು ಛಾಯ ಚಿತ್ರಗಳನ್ನು ನೋಡಿ ಅದರಲ್ಲಿ ತಾನು ಮತ್ತು ನನ್ನ ಸಹೋದರ ಶಿವಮೂರ್ತಿ ನಿಂತಿರುವುದಾಗಿ ತಿಳಿಸಿರುತ್ತಾರೆ. ಸಾಕ್ಷಿಯು ಎರಡು ಛಾಯ ಚಿತ್ರಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿ.ಡಿ.1 ಮತ್ತು 2 ಅಂತ ಗುರುತಿಸಲಾಯಿತು. ನಿ.ಡಿ.1 ಮತ್ತು 2 ರಲ್ಲಿ ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು ಅದು ನಮ್ಮ ಜಮೀನಿಗೆ ಸಂಬಂಧಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪುನಃ ನಿ.ಡಿ.1 ಮತ್ತು 2

ನ್ನು ತೋರಿಸಿ ಅದರಲ್ಲಿ ಕಲ್ಲಿನ ರಾಶಿ ಇರುವುದಾಗಿ ಕೇಳಲಾಗಿ ಸಾಕ್ಷಿಯು ಮನೆ ಕಟ್ಟಲು ಬಂದಿದ್ದರು ಅದನ್ನು ನಾವು ತಡೆ ಹಿಡಿದಿರುತ್ತೇವೆ ಎಂದು ನುಡಿಯುತ್ತಾರೆ.

15. ನಾನು 2 ನೇ ಮೃತ ಪ್ರತಿವಾದಿ ಭೀಮಪ್ಪ ಇವರ ಮನೆಯನ್ನು ನೋಡಿರುತ್ತೇನೆ. ಸಾಕ್ಷಿಯು ಅವರ ಮನೆ ಊರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿ.ಡಿ.1 ಮತ್ತು 2 ರಲ್ಲಿ ಕಾಣಿಸುವ ಕಲ್ಲಿನ ರಾಶಿಯು 1 ನೇ ಪ್ರತಿವಾದಿ ದೊಡ್ಡಪ್ಪರ ಕರಿಯಪ್ಪ ಇವರಿಗೆ ಸೇರಿರುತ್ತದೆ. ಮೃತ ಭೀಮಣ್ಣ ನನ್ನ ಜಮೀನಿನಲ್ಲಿ ಮನೆ ಕಟ್ಟಲು ಪ್ರಯತ್ನಿಸಿರುವುದಿಲ್ಲ. ನಾನು ಭೀಮಣ್ಣ ವಿರುದ್ದ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿ. ನನ್ನ ದಾವಾದ 3 ನೇ ಪ್ಯಾರದಲ್ಲಿ ನಾನು ಬೇರೆ ಊರಿಗೆ ಜೀವನ ಮಾಡಲು ಹೋದಾಗ ಗುಡಿಸಲುಗಳನ್ನು ಮತ್ತು ಮನೆಗಳನ್ನು ತಾತ್ಕಾಲಿಕವಾಗಿ ಕಟ್ಟಿಕೊಂಡಿರುತ್ತಾರೆ ಅಂತ ಹೇಳಿ ಬರೆಸಿರುವುದಿಲ್ಲ.



16. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ದಕ್ಷಿಣ ದಿಕ್ಕಿಗೆ ನಾನು ಹೇಳುವಂತೆ ಪೂರ್ವ-ಪಶ್ಚಿಮ 60 ಅಡಿ, ಉತ್ತರ-ದಕ್ಷಿಣ 100 ಅಡಿ ಮತ್ತು ಪೂರ್ವ-ಪಶ್ಚಿಮ 80 ಅಡಿ, ಉತ್ತರ-ದಕ್ಷಿಣ 100 ಅಡಿ ಜಾಗ ಇರುತ್ತದೆ ಅಂತ ತೋರಿಸಲು ಪಂಚಾಯಿತಿಯಿಂದ ಯಾವುದೇ ದಾಖಲೆಯನ್ನು ತೆಗೆದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 60 X 100 ಅಡಿಯ ಚೆಕ್ಕುಬಂಧಿಯನ್ನು ಹೇಳಬಲ್ಲೆ. ಪೂರ್ವಕ್ಕೆ ಜಯಮ್ಮ ನ ಜಮೀನು, ಪಶ್ಚಿಮಕ್ಕೆ ಗ್ರಾಮಠಾಣಾ ಮನೆಗಳು, ಉತ್ತರಕ್ಕೆ ಜೋಗಿಹಟ್ಟಿ ರಸ್ತೆ, ದಕ್ಷಿಣಕ್ಕೆ ದೊಡ್ಡತಿಪ್ಪಯ್ಯನ ಜಮೀನು ಇರುತ್ತದೆ. 60 X 100 ಅಡಿ ಜಾಗದ ಕುರಿತು ನಾನು ಗೌಡಗೆರೆ ಪಂಚಾಯಿತಿಯಿಂದ ಯಾವುದೇ ಖಾತೆಯನ್ನು ಮಾಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪಹಣಿ ಇರುತ್ತದೆ ಎಂದು ನುಡಿಯುತ್ತಾರೆ.

17. ಅದೇ ರೀತಿ ನನ್ನ ವಾದ ಪತ್ರದಲ್ಲಿ 80 X 100 ಅಡಿ ಜಾಗ ಇರುತ್ತದೆ ಅಂತ ಹೇಳಿದ್ದು, ಅದರ ಚೆಕ್ಕುಬಂಧಿಯನ್ನು ಹೇಳಬಲ್ಲೆ. ಸಾಕ್ಷಿಗೆ ಚೆಕ್ಕುಬಂಧಿಯನ್ನು ಕೇಳಲಾಗಿ ಮೇಲೆ ಹೇಳಿದ ಚೆಕ್ಕುಬಂಧಿಯೇ ಸದರಿ ಜಾಗಕ್ಕೆ ಆಗಿರುತ್ತದೆ ಎಂದು ನುಡಿಯುತ್ತಾರೆ. 80 X 100 ಅಡಿ ಜಾಗದ ಕುರಿತು ನಾನು ಗೌಡಗೆರೆ ಪಂಚಾಯಿತಿಯಿಂದ ಯಾವುದೇ ಖಾತೆಯನ್ನು ಮಾಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಪಹಣಿ ಇರುತ್ತದೆ ಎಂದು ನುಡಿಯುತ್ತಾರೆ.

18. ಮೇಲೆ ಹೇಳಿದ 60 X 100 ಅಡಿ ಮತ್ತು 80 X 100 ಅಡಿ ಜಾಗಕ್ಕೆ ನಾನು ಮತ್ತು ನನ್ನ ಸಹೋದರ ಮಾಲೀಕ ಮತ್ತು ಸ್ವಾಧೀನದಾರರು ಅಂತ ತೋರಿಸಲು ಏನು ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

19. ನಾನು ಓ.ಎಸ್.579/1993 ರ ದಾವೆಯಲ್ಲಿ ರಾಜೀ ಮಾಡಿಕೊಂಡಂತೆ 12 ಜನರ ಸೈಟಿನ ವಿಸ್ತೀರ್ಣವನ್ನು ಸೇರಿಸಿ ನೋಡಲಾಗಿ ಅದು ಒಟ್ಟು 19,758 ಸಕ್ವಯರ್ ಫೀಟ್ ಆಗುತ್ತದೆ ಎಂದರೆ ಸರಿಯಲ್ಲ. ಓ.ಎಸ್.579/1993 ರ ದಾವೆಯಲ್ಲಿ ನಾನು 12 ಜನರಿಗೆ ನಿವೇಶನವನ್ನು ಕರಾರು ಪತ್ರದಂತೆ ಮಾರಾಟ ಮಾಡಿದ ನಂತರ ಅದನ್ನು ಹೊರತುಪಡಿಸಿ ನಾನು 2 ನೇ ಪ್ರತಿವಾದಿ ತಂದೆಯಾದ ಮಾಳಪ್ಪನಿಗೆ 65 X 80, ಸಂಜೀವಪ್ಪನಿಗೆ 38 X 45 ಅಡಿ ಮತ್ತು ಗೋವಿಂದಪ್ಪನಿಗೆ 20 X 20 ಅಡಿ ಅಳತೆಯ ಜಾಗವನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಮೂರು ಜನರ ಸೈಟಿನ ವಿಸ್ತೀರ್ಣವನ್ನು ಜೋಡಿಸಿ ನೋಡಿದಾಗ 7,310 ಸಕ್ವಯರ್ ಫೀಟ್ ಆಗುತ್ತದೆ ಎಂದರೆ ಸಾಕ್ಷಿಯು ನಾನು ಯಾವುದೇ ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ.

20. ನನ್ನ ವಾದ ಪತ್ರದ ಮೂರನೇ ಪ್ಯಾರದಲ್ಲಿ ಹೇಳಿರುವಂತೆ 60 X 100 ಅಡಿ ಮತ್ತು 80 X 100 ಅಡಿ ಅಳತೆ ಜಾಗವನ್ನು ಒಟ್ಟುಗೂಡಿಸಿ ನೋಡಿದಾಗ 14,000 ಸಕ್ವಯರ್ ಫೀಟ್ ಆಗುತ್ತದೆ ಎಂದರೆ ಸರಿಯಲ್ಲ.

21. ನಾನು ಓ.ಎಸ್.579/1993 ರ ದಾವೆಯಲ್ಲಿ 12 ಜನರಿಗೆ ರಾಜೀ ಮಾಡಿಕೊಂಡಂತೆ ಕೊಟ್ಟಿರುವ ಜಾಗದ ವಿಸ್ತೀರ್ಣ 2ನೇ ಪ್ರತಿವಾದಿ ತಂದೆಯಾದ ಮಾಳಪ್ಪನಿಗೆ 65 X 80, ಸಂಜೀವಪ್ಪನಿಗೆ 38 X 45 ಅಡಿ ಮತ್ತು ಗೋವಿಂದಪ್ಪನಿಗೆ 20 X 20 ಅಡಿ ಅಳತೆಯ ಜಾಗವನ್ನು ಒಟ್ಟುಗೂಡಿಸಿ ನೋಡಿದಾಗ 48,068 ಸಕ್ವಯರ್ ಫೀಟ್ ಆಗುತ್ತದೆ ಎಂದರೆ ಸರಿಯಲ್ಲ.

22. 1 ಎಕರೆಗೆ ಎಷ್ಟು ಗುಂಟೆ ಎಂದರೆ ಸಾಕ್ಷಿಯು 40 ಗುಂಟೆ ಎಂದು ನುಡಿಯುತ್ತಾರೆ. 1 ಗುಂಟೆಗೆ ಎಷ್ಟು ಅಳತೆ ಇರುತ್ತದೆ ಅಂತ ನನಗೆ ಗೊತ್ತಿಲ್ಲ. 1 ಗುಂಟೆಗೆ 1,089.30 ಸಕ್ವಯರ್ ಫೀಟ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಓ.ಎಸ್.579/1993 ರ ದಾವೆಯಲ್ಲಿ ರಾಜೀ ಮಾಡಿಕೊಂಡಂತ ಜಾಗದ ವಿಸ್ತೀರ್ಣ, ನಂತರ 2ನೇ ಪ್ರತಿವಾದಿ ತಂದೆ ಮಾಳಪ್ಪನಿಗೆ ಮತ್ತು ಇನ್ನಿಬ್ಬರಿಗೆ ಮಾರಾಟ ಮಾಡಿದ ವಿಸ್ತೀರ್ಣವನ್ನು ಒಟ್ಟುಗೂಡಿಸಿ ನೋಡಿದಾಗ 1 ಎಕರೆಗಿಂತ ಜಾಸ್ತಿ ಜಮೀನು ಆಗುತ್ತದ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ.

23. ನಾನು ಪ್ರತಿವಾದಿಯವರ ವಿರುದ್ದ ದ್ವೇಷ ಸಾಧಿಸಲು ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೆ.ರುದ್ರಪ್ಪ ತಂದೆ ಕಾಟಪ್ಪ ನಮ್ಮ ಊರಿನವರು ಎಂದರೆ ಸರಿ.

**(2ನೇಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.